**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**
**ಸಿಸಿ ಸಂಖ್ಯೆ 569/2024**

ಫಿರ್ಯಾದಿಃ ಸರ್ಕಾರದ ಪರವಾಗಿ,
ಪೊಲೀಸ್ ಉಪ-ನಿರೀಕ್ಷಕರು,
ಹೊನ್ನಾವರ ಪೊಲೀಸ್ ಠಾಣೆ.

**-ವಿರುದ್ಧ-**

ಆರೋಪಿ ಅರುಣ ಕೇಶವ ನಾಯ್ಕ,
ವಯಸ್ಸುಃ 52 ವರ್ಷಗಳು,
ಉದ್ಯೋಗಃ ಕೂಲಿ ಕೆಲಸ,
ಸಾಕೀನಃ ಚಂದಾವರ ನಾಕಾ, ಚಂದಾವರ,
ತಾಲೂಕುಃ ಹೊನ್ನಾವರ.

**ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 313 ಅಡಿಯಲ್ಲಿ ದಾಖಲು ಮಾಡಿಕೊಂಡ ಆರೋಪಿಯ ಹೇಳಿಕೆ**

ಪ್ರಶ್ನೆ 1: ನೀವು ಅಭಿಯೋಜಕರ ಪರ ಸಾಕ್ಷಿದಾರರ ಸಾಕ್ಷಿ ಹೇಳಿಕೆಯನ್ನು ಕೇಳಿದ್ದೀರಾ?
ಉತ್ತರಃ

ಪ್ರಶ್ನೆ2: ಫ್ರಾಸಾ-3 ರಾಮನಗರ ಠಾಣೆಯ ಆರಕ್ಷಕ ಉಪ-ನಿರೀಕ್ಷಕರಾದ ಮಹಾಂತೇಶ ಉದಯ ನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12-08-2024ರಂದು ಬೆಳಿಗ್ಗೆ 11-00ರ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ಚಾಸಾ-4ರವರು ಕರೆ ಮಾಡಿ ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನದ ಕಡೆಗೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿಯು ತನ್ನ ವಾಸದ ಮನೆಯಲ್ಲಿ ಅಕ್ರಮ ಮದ್ಯವನ್ನು ಮಾರಾಟ ಮಾಡಲು ಅಕ್ರಮವಾಗಿ ತನ್ನ ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಮಾಹಿತಿ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ3: ಫ್ರಾಸಾ-3ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರಂತೆ ತಾನು ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ, ಘಟನಾ ಸ್ಥಳವು ವಾಸದ ಮನೆಯಾಗಿದ್ದರಿಂದ ಚಾಸಾ-10ರವರ ಮೂಲಕ ಭಟ್ಕಳ ಉಪ ವಿಭಾಗದ ಡಿವೈಎಸ್‌ಪಿ ರವರಿಗೆ ಸರ್ಚ ವಾರಂಟ್‌ಗಾಗಿ ಮನವಿ ಸಲ್ಲಿಸಿ, ಅದೇ ದಿನ ಮಧ್ಯಾಹ್ನ 12-30ರ ಸಮಯಕ್ಕೆ ಚಾಸಾ-10ರವರು ಸರ್ಚ ವಾರಂಟ್ ಪಡೆದುಕೊಂಡು ಬಂದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ4: ಫ್ರಾಸಾ–3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರಂತೆ ಮಧ್ಯಾಹ್ನ 12–35 ರ ವೇಳೆಗೆ ತಾನು ಚಾಸಾ–5 ರಿಂದ 8 ರವರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಹೊರಟು ಮಧ್ಯಾಹ್ನ 01–00 ಗಂಟೆಯ ಸಮಯಕ್ಕೆ ಚಂದಾವರ ಸೇತುವೆಯ ಹತ್ತಿರ ಹೋಗಿ ಚಾಸಾ–4 ರವರ ಮೂಲಕ ಚಾಸಾ–2 ಮತ್ತು 3 ರವರನ್ನು ಪಂಚರಾನ್ನಾಗಿ ಬರಮಾಡಿಕೊಂಡಿದ್ದು, ಅವರಿಗೆ ಮಾಹಿತಿ ತಿಳಿಸಿದ್ದು, ಅವರು ಒಪ್ಪಿಕೊಂಡಿದ್ದು, ಅವರಿಗೆ ನೋಟಿಸ್ ನೀಡಿರುವುದಾಗಿ ಮಾಹಿತಿ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ5: ಫ್ರಾಸಾ–3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಅಲ್ಲಿಂದ ಹೊರಟು 01–20 ರ ವೇಳೆಗೆ ಮಾಹಿತಿ ಬಂದ ಆರೋಪಿ ಮನೆ ಹತ್ತಿರ ಹೋಗಲಾಗಿ ಚಾಸಾ–4 ರವರು ಸುಮಾರು 50 ಅಡಿ ದೂರದಿಂದ ಆರೋಪಿ ಮನೆಯನ್ನು ತೋರಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ6: ಫ್ರಾಸಾ–3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರಂತೆ ಮಧ್ಯಾಹ್ನ 01–30 ರ ಸಮಯದಲ್ಲಿ ಆರೋಪಿಯ ಮನೆಯ ಮೇಲೆ ಪಂಚರ ಸಮಕ್ಷಮ ದಾಳಿ ಮಾಡಿ ಆತನ ಮನೆಯಲ್ಲಿ ಒಬ್ಬ ವ್ಯಕ್ತಿ ಇದ್ದು, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಅರುಣ ತಂದೆ ಕೇಶವ ಎಂದು ತಿಳಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ7: ಫ್ರಾಸಾ–3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆತನಿಗೆ ದಾಳಿಯ ಮಾಹಿತಿ ತಿಳಿಸಿ ಆತನ ಮನೆಯನ್ನು ಪರಿಶೀಲಿಸಿದಾಗ ಅಡುಗೆ ಮನೆಯ ದಕ್ಷಿಣದಲ್ಲಿ ಎರಡು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮತ್ತು ಒಂದು ರಟ್ಟಿನ ಬಾಕ್ಸನಲ್ಲಿ ಮದ್ಯ ಇರುವುದು ಕಂಡು ಬಂದಿದ್ದು, ಆರೋಪಿಯ ಬಳಿ ಅವುಗಳ ಬಗ್ಗೆ ಲೈಸನ್ಸ ಕೇಳಿದಾಗ ಇಲ್ಲವೆಂದು ಹೇಳಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ8: ಫ್ರಾಸಾ–3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಂಚರ ಸಮಕ್ಷಮ ಅವುಗಳನ್ನು ತೆರೆದು ನೋಡಿದಾಗ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 500 ಎಮ್ ಎಲ್ ನ 17 ಯುಬಿ ಎಕ್ಸಪೋರ್ಟ ಬಿಯರ್ ಟಿನಗಳು, 180 ಎಮ್ ಎಲ್ ನ 9 ಬೆಂಗಳೂರು ವಿಸ್ಕಿ ಪೌಚ್ ಗಳು, 90 ಎಮ್ ಎಲ್ ನ 138 ಓಸಿ ಡಿಲಕ್ಸ ವಿಸ್ಕಿ ಪೌಚ್ ಗಳು, 90 ಎಮ್ ಎಲ್ ನ 84 ಹೈವರ್ಡ್ಸ ಚಿಯರ್ಸ ವಿಸ್ಕಿ ಪೌಚ್ ಗಳು, 180 ಎಮ್ ಎಲ್ ನ 20 ಓಟಿ ವಿಸ್ಕಿ ಪೌಚ್ ಗಳು ಇದ್ದವು. ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ9: ಫ್ರಾಸಾ-3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಸದರಿ ಮದ್ಯಗಳನ್ನು ಪ್ಲಾಸ್ಟಿಕ್ ಚೀಲಗಳನ್ನು ಮತ್ತು ರಟ್ಟಿನ ಬಾಕ್ಸಗಳನ್ನು ಅಮಾನತ್ತು ಪಡಿಸಿಕೊಂಡು ಎಲ್ಲಾ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಬಿಳಿಯ ಚೀಲದಲ್ಲಿ ಹಾಕಿ ಸೀಲ್ ಮಾಡಿ ಪಂಚರ ಸಹಿ ತೆಗೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.10: ಫ್ರಾಸಾ-3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈಗ ಬಗ್ಗೆ ವಿವರವಾದ ಪಂಚನಾಮೆಯನ್ನು ಮಧ್ಯಾಹ್ನ 01-00 ರಿಂದ 02-15 ರ ಸಮಯದಲ್ಲಿ ತಯಾರಿಸಿ ಈ ಬಗ್ಗೆ ಫೋಟೋ ತೆಗೆದು ಸಂಪೂರ್ಣ ದಾಳಿಯ ವಿವರವನ್ನು Sony Handy Camera ದಲ್ಲಿ ಚಿತ್ರೀಕರಣ ಮಾಡಿಕೊಂಡಿದ್ದು, ಸದರಿ ಚಿತ್ರೀಕರಣವನ್ನು Laptop ಹಾಕಿ ಡಿವಿಡಿಗೆ Download ಮಾಡಿ ಪಂಚರ ಸಮಕ್ಷಮ Hashing ವರದಿಯನ್ನು ತಯಾರಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.11: ಫ್ರಾಸಾ-3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಒಂದು ದೂರನ್ನು ತಯಾರಿಸಿ ಠಾಣಾಧಿಕಾರಿಯವರ ಮುಂದೆ ದೂರು, ಆರೋಪಿ, ಪಂಚನಾಮೆ ಮತ್ತು ಅಮಾನತ್ತುಪಡಿಸಿಕೊಂಡ ಮದ್ಯವನ್ನು ಹಾಜರುಪಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.12: ಫ್ರಾಸಾ-4 ಭಟ್ಕಳ ನಗರ ಠಾಣೆಯ ಮಹಿಳಾ ಮುಖ್ಯ ಪೇದೆ ಆಗಿರುವ ಪದ್ಮಾವತಿ ನಾರಾಯಣ ಗೌಡ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12-08-2024 ರಂದು ಮಧ್ಯಹ್ನ 12-30 ರ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ತನ್ನನ್ನು ಮತ್ತು ಚಾ.ಸಾ. 2 ರಿಂದ 4, 6 ಮತ್ತು 7 ರವರನ್ನು ಕರೆದು ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನದ ಕಡೆಗೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿಯು ತನ್ನ ವಾಸದ ಮನೆಯಲ್ಲಿ ಅಕ್ರಮ ಮದ್ಯವನ್ನು ಮಾರಾಟ ಮಾಡಲು ಅಕ್ರಮವಾಗಿ ತನ್ನ ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಮಾಹಿತಿ ಬಂದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.13: ಫ್ರಾಸಾ-4 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರಂತೆ ತಾನು ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ, ಘಟನಾ ಸ್ಥಳವು ವಾಸದ ಮನೆಯಾಗಿದ್ದರಿಂದ ಚಾಸಾ-10 ರವರ ಮೂಲಕ ಭಟ್ಕಳ ಉಪ ವಿಭಾಗದ ಡಿವೈಎಸ್‌ಪಿ ರವರಿಗೆ ಸರ್ಚ ವಾರಂಟ್‌ಗಾಗಿ ಮನವಿ ಸಲ್ಲಿಸಿ, ಸರ್ಚ ವಾರಂಟ್ ಪಡೆದುಕೊಂಡಿದ್ದು, ದಾಳಿಗೆ ಹೋಗಬೇಕು ಎಂದು ತಮಗೆ ತಿಳಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.14: ಫ್ರಾಸಾ-4 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರಂತೆ ಮಧ್ಯಾಹ್ನ 12-35 ರ ವೇಳೆಗೆ ಚಾ.ಸಾ. 1 ರವರು ತಮ್ಮನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿದ್ದು, ಮಧ್ಯಾಹ್ನ 01-00 ಗಂಟೆಯ ಸಮಯಕ್ಕೆ ಚಂದಾವರ ಸೇತುವೆಯ ಹತ್ತಿರ ಹೋಗಿ ಚಾಸಾ-4 ರವರ ಮೂಲಕ ಚಾಸಾ-2 ಮತ್ತು 3 ರವರನ್ನು ಪಂಚರಾನ್ನಾಗಿ ಬರಮಾಡಿಕೊಂಡಿದ್ದು, ಅವರಿಗೆ ಮಾಹಿತಿ ತಿಳಿಸಿದ್ದು, ಅವರು ಒಪ್ಪಿಕೊಂಡಿದ್ದು, ಅವರೊಡನೆ ಅಲ್ಲಿಂದ ಹೊರಟು 01-20 ರ ವೇಳೆಗೆ ಮಾಹಿತಿ ಬಂದ ಆರೋಪಿ ಮನೆ ಹತ್ತಿರ ಹೋಗಲಾಗಿ ಚಾಸಾ-4 ರವರು ಸುಮಾರು 50 ಅಡಿ ದೂರದಿಂದ ಆರೋಪಿ ಮನೆಯನ್ನು ತೋರಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.15: ಫ್ರಾಸಾ-4 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರಂತೆ ಮಧ್ಯಾಹ್ನ 01-30 ರ ಸಮಯದಲ್ಲಿ ಆರೋಪಿಯ ಮನೆಯ ಮೇಲೆ ಪಂಚರ ಸಮಕ್ಷಮ ದಾಳಿ ಮಾಡಿ ಆತನ ಮನೆಯಲ್ಲಿ ಒಬ್ಬ ವ್ಯಕ್ತಿ ಇದ್ದು, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಅರುಣ ತಂದೆ ಕೇಶವ ಎಂದು ತಿಳಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.16: ಫ್ರಾಸಾ-4 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆತನಿಗೆ ದಾಳಿಯ ಮಾಹಿತಿ ತಿಳಿಸಿ ಆತನ ಮನೆಯನ್ನು ಪರಿಶೀಲಿಸಿದಾಗ ಅಡುಗೆ ಮನೆಯ ದಕ್ಷಿಣದಲ್ಲಿ ಎರಡು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮತ್ತು ಒಂದು ರಟ್ಟಿನ ಬಾಕ್ಸನಲ್ಲಿ ಮದ್ಯ ಇರುವುದು ಕಂಡು ಬಂದಿದ್ದು, ಆರೋಪಿಯ ಬಳಿ ಚಾ.ಸಾ. 1 ರವರು ಅವುಗಳ ಬಗ್ಗೆ ಲೈಸನ್ಸ ಕೇಳಿದಾಗ ಇಲ್ಲವೆಂದು ಹೇಳಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.17: ಫ್ರಾಸಾ-4 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಂಚರ ಸಮಕ್ಷಮ ಅವುಗಳನ್ನು ತೆರೆದು ನೋಡಿದಾಗ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 500 ಎಮ್ ಎಲ್ ನ 17 ಯುಬಿ ಎಕ್ಸಪೊರ್ಟ ಬಿಯರ್ ಟಿನಗಳು, 180 ಎಮ್ ಎಲ್ ನ 9 ಬೆಂಗಳೂರು ವಿಸ್ಕಿ ಪೌಚ್ ಗಳು, 90 ಎಮ್ ಎಲ್ ನ 138 ಓಸಿ ಡಿಲಕ್ಸ ವಿಸ್ಕಿ ಪೌಚ್ ಗಳು, 90 ಎಮ್ ಎಲ್ ನ 84 ಹೈವರ್ಡ್ಸ ಚಿಯರ್ಸ ವಿಸ್ಕಿ ಪೌಚ್ ಗಳು, 180 ಎಮ್ ಎಲ್ ನ 20 ಓಟಿ ವಿಸ್ಕಿ ಪೌಚ್ ಗಳು ಇದ್ದವು. ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.18: ಫ್ರಾಸಾ-4 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಸದರಿ ಮದ್ಯಗಳನ್ನು, ಪ್ಲಾಸ್ಟಿಕ್ ಚೀಲಗಳನ್ನು ಮತ್ತು ರಟ್ಟಿನ ಬಾಕ್ಸಗಳನ್ನು ಅಮಾನತ್ತು ಪಡಿಸಿಕೊಂಡು ಎಲ್ಲಾ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಬಿಳಿಯ ಚೀಲದಲ್ಲಿ ಹಾಕಿ ಸೀಲ್ ಮಾಡಿ ಪಂಚರ ಸಹಿ ತೆಗೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.19: ಫ್ರಾಸಾ-4 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈಗ ಬಗ್ಗೆ ವಿವರವಾದ ಪಂಚನಾಮೆಯನ್ನು ಮಧ್ಯಾಹ್ನ 01-00 ರಿಂದ 02-15 ರ ಸಮಯದಲ್ಲಿ ತಯಾರಿಸಿ ಈ ಬಗ್ಗೆ ಪೋಟೋ ತೆಗೆದು ಸಂಪೂರ್ಣ ದಾಳಿಯ ವಿವರವನ್ನು Sony Handy Camera ದಲ್ಲಿ ಚಿತ್ರಿಕರಣ ಮಾಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.20: ಫ್ರಾಸಾ-5 ಹೊನ್ನಾವರ ಪೊಲೀಸ್ ಠಾಣೆಯ ಆರಕ್ಷಕ ಉಪ-ನಿರೀಕ್ಷಕರಾದ ಶ್ರೀಮತಿ ಸಂಗೀತಾ ಕಾರ್ತಿಕ್ ಕಂಬಳಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12-08-2024 ರಂದು ಮಧ್ಯಾಹ್ನ 03-00 ಗಂಟೆಗೆ ಚಾಸಾ-1 ರವರು ಅಬಕಾರಿ ದಾಳಿಯ ನಂತರ ಠಾಣೆಗೆ ಹಾಜರಾಗಿ ಒಂದು ದೂರು, ಪಂಚನಾಮೆ ಮತ್ತು ಪಂಚನಾಮಯಡಿಯಲ್ಲಿ ಹಾಜರುಪಡಿಸಿಕೊಂಡ ಮುದ್ದೆಮಾಲುಗಳು ಮತ್ತು ಆರೋಪಿಯನ್ನು ಹಾಜರುಪಡಿಸಿದ್ದು ಸದರಿ ದೂರಿನ ಆಧಾರದಲ್ಲಿ ಠಾಣಾ ಮೊಕದ್ದಮೆ ಸಂಖ್ಯೆ:181/2024 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.21: ಫ್ರಾಸಾ-5 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಕಲಂ 63(4)ರ ಪ್ರಮಾಣಪತ್ರವನ್ನು ಪಡೆದುಕೊಂಡು ಹಾಜರುಪಡಿಸಿಕೊಂಡ ಮುದ್ದೆಮಾಲುಗಳನ್ನು ಠಾಣಾ ಪಿಎಫ್.ನಲ್ಲಿ ನಮೂದಿಸಿ, ಅಕ್ರಮ ಮದ್ಯ ಅಮಾನತ್ತುಪಡಿಸಿಕೊಂಡ ಬಗ್ಗೆ ಅಬಕಾರಿ ಉಪಆಯುಕ್ತರಿಗೆ ಮಾಹಿತಿ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.22: ಫ್ರಾಸಾ-5 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಹಾಜರುಪಡಿಸಿದ ಆರೋಪಿಯನ್ನು ಬಂಧಿಸಿ ದಸ್ತಗಿರಿ ಕ್ರಮ ಅನುಸರಿಸಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.23: ಫ್ರಾಸಾ–5 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಾಳಿಯ ಕಾಲಕ್ಕೆ ಸಹಕರಿಸಿದ ಚಾಸಾ–4 ರಿಂದ 10 ರವರ ಹೇಳಿಕೆ ಪಡೆದು ದಿನಾಂಕ 20–08–2024 ರಂದು ಅಮಾನತ್ತುಪಡಿಸಿಕೊಂಡಿದ್ದ ಮದ್ಯವನ್ನು ಚಾಸಾ–11 ರವರ ಮೂಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿ ದಿನಾಂಕ 22–08–2024 ರಂದು ಎಫ್.ಎಸ್. ಎಲ್. ವರದಿಯನ್ನು ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.24: ಫ್ರಾಸಾ–5 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 26–08–2024 ರಂದು ಘಟನಾ ಸ್ಥಳದ ಮಾಲಿಕತ್ವಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪೂರೈಸುವಂತೆ ಚಂದಾವರ ಗ್ರಾಮಪಂಚಾಯತಿ ಪಿಡಿಒರವರಿಗೆ ಪತ್ರ ಬರೆದು ದಿನಾಂಕ 28–08–2024 ರಂದು ಪಿಡಿಒರವರಿಂದ ಪ್ರಕರಣಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಪಡೆದುಕೊಂಡು ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.25: ನೀವು ಹೇಳುವುದಾದರು ಏನು ಇದೆಯೇ?

ಉತ್ತರಃ

ಪ್ರಶ್ನೆಃ.26: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯ ಇರುತ್ತದೆಯೇ?

ಉತ್ತರಃ

(ವಿಹಿತ ಹೇಳಿಕೆಯನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಕೇಳಿದ ಪ್ರಶ್ನೆಗಳಿಗೆ ಆರೋಪಿಯು ನೀಡಿರುವ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದು ಕೊಳ್ಳಲಾಗಿರುತ್ತದೆ.)

Sd/-

ದಿನಾಂಕಃ 27–02–2026.

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯದಂಡಾಧಿಕಾರಿಗಳು, ಹೊನ್ನಾವರ.**